ರಿಯಾಯಿತಿ ದರದಲ್ಲಿ "ಎಲ್‌ಇಡಿ" ಬಲ್ಬ್‌ಗಳನ್ನು ವಿವರಿಸುವುದು.

5366 (5421); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ರಾಜ್ಯದಲ್ಲಿ "ಎಲ್‌ಇಡಿ" ವಿದ್ಯುತ್ ಬಲ್ಬುಗಳನ್ನು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ವಿತರಿಸುವ ಯೋಜನೆಯನ್ನು ಸರ್ಕಾರ ಪ್ರಾರಂಭಿಸಿದೆಯೇ;

ಆ) ಹಾಗಿದ್ದಲ್ಲಿ, "ಎಲ್‌ಇಡಿ" ಬಲ್ಬುಗಳನ್ನು ವಿತರಿಸಿದಲ್ಲಿ ರಾಜ್ಯದ ಬೊಕ್ಕಸಕ್ಕೆ ತಗಲುವ ವೆಚ್ಚವೆಷ್ಟು ಹಾಗೂ ಉಳಿತಾಯವಾಗುವ ವಿದ್ಯುತ್ತಿನ ಪ್ರಮಾಣವೆಷ್ಟು (ಸಮಗ್ರ ಮಾಹಿತಿ ನೀಡುವುದು);

ಇ) "ಎಲ್‌ಇಡಿ" ವಿದ್ಯುತ್ ಬಲ್ಬುಗಳನ್ನು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ನೀಡುವ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗುವುದು (ವಿವರ ನೀಡುವುದು);

ಶ್ರೀ ಡಿ. ಕೆ. ಶಿವಕುಮಾರ (ಇಂಧನ ಸಚಿವರು)

ಅ) ಹೌದು. ಎಲ್.ಇ.ಡಿ. ಬಲ್ಬುಗಳನ್ನು ರಿಯಾಯಿತಿ ದರದಲ್ಲಿ ಗ್ರಾಹಕರಿಗೆ ವಿತರಿಸಲು ಸರ್ಕಾರ ಯೋಜನೆಯನ್ನು ರೂಪಿಸಿದ್ದು, ವಿದ್ಯುತ್ ವಿತರಣಾ ಕಂಪನಿಗಳ ಮೂಲಕ ಗೃಹಬಳಕೆ ಗ್ರಾಹಕರಿಗೆ ವಿತರಿಸಲಾಗುತ್ತದೆ.

ಆ) ಈ ಯೋಜನೆಗೆ ಪ್ರಸ್ತುತ ಸರ್ಕರದಿಂದ ಯಾವುದೇ ಅನುದಾನ ಮೀಸಲಿರಿಸಿರುವುದಿಲ್ಲ.

ಗ್ರಾಹಕರಿಂದಲೇ ಬಲ್ಬ್ ಬೆಲೆಯನ್ನು ಒಮ್ಮೆಲೇ ಇಲ್ಲವೇ ಕಂತುಗಳ ರೂಪದಲ್ಲಿ ಯೋಜನೆಯ ಅನುಷ್ಠಾನದಾರರಾದ M/s. Energy Efficiency Services Limited (EESL) ರವರು ಪಡೆಯಲಿದ್ದಾರೆ. ಈ ಬಗ್ಗೆ ಕೆ.ಇ.ಆರ್.ಸಿ. ರವರೊಡನೆ ವ್ಯವಹರಿಸಲಾಗುತ್ತಿದೆ.

ಎಲ್.ಇ.ಡಿ. ಬಲ್ಬುಗಳನ್ನು ಬಳಸುವುದರಿಂದ ಶೇ. 30 ರಷ್ಟು ವಿದ್ಯುತ್ ಉಳಿತಾಯವಾಗುತ್ತದೆ.

ಇ) ಎಲ್.ಇ.ಡಿ. ಬಲ್ಬುಗಳನ್ನು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ವಿತರಿಸುವ ಯೋಜನೆಯನ್ನು ಜನವರಿ–2016ರಿಂದ ಜಾರಿಗೊಳಿಸಲು ಉದ್ದೇಶಿಸಿದೆ.

ಗೋದಾಮುಗಳು

5370 (5930); ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ರಾಜ್ಯದಲ್ಲಿರುವ ಒಟ್ಟು ಗೋದಾಮುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ನಬಾರ್ಡ ಹಾಗೂ ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಗೋದಾಮುಗಳನ್ನು ನಿರ್ಮಾಣ ಮಾಡಲಾಗುತ್ತಿದೆಯೇ; ಟೆಂಡರ್ ಪ್ರಕ್ರಿಯೆ ರೂಪು ರೇಷೆಗಳನ್ನು ನೀಡುವುದು;

ಇ) ಹಾಗಿದ್ದಲ್ಲಿ, ಪ್ರತಿ 1000 ಟನ್ ಗೋದಾಮು ಕನಿಷ್ಠ ರೂ. 1.00 ಕೋಟಿಯಿಂದ ಗರಿಷ್ಟ ರೂ. 3.00 ಕೋಟಿಗಳವರೆಗೆ ಖರ್ಚು ಮಾಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರವು ಪ್ರತಿ 1000 ಟನ್ ಗೋದಾಮು ನಿರ್ಮಾಣಕ್ಕೆ ಕನಿಷ್ಠ ರೂ. 30.00 ಲಕ್ಷಗಳಿಂದ ಗರಿಷ್ಠ ರೂ. 50.00 ಲಕ್ಷಗಳವರೆಗೆ ಖರ್ಚು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗೋದಾಮು ನಿರ್ಮಾಣಗಳ ಮಧ್ಯ ಭಾರಿ ಮೊತ್ತದ ವ್ಯತ್ಯಾಸವಿರುವುದಕ್ಕೆ ಕಾರಣಗಳೇನು;